# ಚಿತ್ರರಂಗದ ಉದ್ಧಾರಕ್ಕೆ ಡಿ ಬಾಸ್ ಹೊಸ ಸೂತ್ರ!



'ಸಿನಿಮಾ ಮಾಡುವ ವಿಧಾನ ಬದಲಾದಂತೆ ಅದನ್ನು ನೋಡುವ ಕ್ರಮವೂ ಬದಲಾಗಬೇಕು' ಎಂಬುದು ಹಳೆಯ ಮಾತು. ಹೀಗೆ ಸಿನಿಮಾವನ್ನು ನೋಡುವ ಹೊಸ 'ಕ್ರಮ'ವೊಂದನ್ನು ಕನ್ನಡದ ಸ್ಟಾರ್ ನಟ ದರ್ಶನ್ ತೂಗುದೀಪ್ ಕಂಡುಹಿಡಿದಿದ್ದಾರೆ. ಈ ಕ್ರಮದಲ್ಲಿ ನೋಡಿದರೆ ಕನ್ನಡ ಚಿತ್ರರಂಗ ಉದ್ಧಾರವಾಗುತ್ತದೆ ಎಂಬುದು ಅವರ ಖಚಿತ ಮಾತು.

ನೆರೆಯ ತಮಿಳು, ಮಲಯಾಳಿ, ತೆಲುಗು, ಮರಾಠಿ ಸಿನಿಮಾಗಳು ದಾಪುಗಾಲು ಹಾಕಿ ಮುನ್ನುಗ್ಗುತ್ತಿವೆ. ಕನ್ನಡ ಚಿತ್ರರಂಗ, ಇನ್ನೂ ಆಘಾತದಿಂದ ಚೇತರಿಸಿಕೊಳ್ಳುತ್ತಿರುವವರ ಹಾಗೆ ಕುಂಟುತ್ತಿರುವ ಈ ಶೋಚನೀಯ ಸಂದರ್ಭದಲ್ಲಿ ಸ್ಟಾರ್ ನಟನೊಬ್ಬನ ಈ ಅನ್ವೇಷಣೆ, ನಿಜಕ್ಕೂ ಕನ್ನಡ ಚಿತ್ರರಂಗ ಮತ್ತು ಅದರತ್ತ ಆಸೆಗಣ್ಣಿನಿಂದ ನೋಡುತ್ತಿರುವ ಸಹೃದಯೀ ಪ್ರೇಕ್ಷಕರ ಪಾಲಿಗೆ ಮರುಜವಣಿ ಕಡ್ಡಿಯಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಆದರೆ ಈ ಅನ್ವೇಷಣೆ ಪ್ರಾಯೋಗಿಕವಾಗಿ ಜಾರಿಯಾಗಬೇಕಾದರೆ ಚಿತ್ರಮಂದಿರಗಳ ಆಸನ ವ್ಯವಸ್ಥೆಯನ್ನು ಮರುವಿನ್ಯಾಸ ಮಾಡಬೇಕಾದ ಅಗತ್ಯ ಬರಬಹುದು. ಚಿತ್ರರಂಗಕ್ಕೆ ಜಿಗಿದೇಳುವ ಶಕ್ತಿ ಸಿಕ್ಕುವುದಾದರೆ ಆಸನ ಬದಲಿಸುವುದು ಯಾವ ದೊಡ್ಡ ವಿಷಯ ಬಿಡಿ. ಅದನ್ನು ಬೇಕಾದರೆ ಚಾಲೆಂಜಿಂಗ್ ಸ್ಟಾರ್ ನೀಡಿದ ಚಾಲೆಂಜ್ ಅಂದುಕೊಂಡು ಸಾಧಿಸಿಬಿಡಬಹುದು. ಅವರ ಅಭಿಮಾನಿ ದೇವರುಗಳು ಈಗಾಗಲೇ ಅದರ ಪ್ರಾಯೋಗೀಕರಣಕ್ಕೆ ಶತಪ್ರಯತ್ನ ಮಾಡುತ್ತ ಮೈಕೈ ಗಾಯಮಾಡಿಕೊಳ್ಳುತ್ತಿದ್ದಾರಂತೆ.

ಅಂದಹಾಗೆ ಡಿ ಬಾಸ್ ಕಂಡುಹಿಡಿದಿರುವ, ಚಿತ್ರರಂಗದ ಉದ್ಧಾರದ ಸೂತ್ರ ಯಾವುದು? ಅವರ ಮಾತಿನಲ್ಲೇ ಹೇಳುವುದಾದರೆ (ಆ ಸೂತ್ರವನ್ನು ಬೇರೆಯವರ ಮಾತಿನಲ್ಲಿ ಹೇಳಲು ಸಾಧ್ಯವೇ ಇಲ್ಲ ಬಿಡಿ!) 'ಅಂಡು ಬಗ್ಗಿಸಿಕೊಂಡು ಕನ್ನಡ ಸಿನಿಮಾ ನೋಡಿ'. ಇದೇನು ಹೀಗೆಲ್ಲ ಮಾತಾಡ್ತಾರೆ ಎಂದು ಮುಖ ಕಿವುಚಬೇಡಿ. ಸತ್ಯ ಯಾವಾಗಲೂ ಕಟುವಾಗಿಯೇ ಇರುತ್ತದೆ. ಇದನ್ನು ಒಂದು ಮಾತಲ್ಲ, ಸೂತ್ರವಾಗಿ ನೋಡಬೇಕು. ಆಗ ಅದರ ಅರ್ಥ ಸಾಧ್ಯತೆಗಳು ವಿಸ್ತಾರವಾಗುತ್ತ ಹೋಗುತ್ತವೆ. ಆ ಸಾಲಿನಲ್ಲಿ ಮಾಸ್ ಹೀರೊ ತುಂಬಿದ ಮಾಂತ್ರಿಕ ಶಕ್ತಿಯ ಅರಿವಾಗುತ್ತದೆ.

ಕನ್ನಡಿಗರು ಬೇರೆ ಭಾಷೆಯ ನಟರನ್ನು ತಲೆಮೇಲೆ ಹೊತ್ತು ಮೆರೆಸುತ್ತಾರೆ. ಆದರೆ ಕನ್ನಡದ ನಟನೇ ಆ ರೀತಿಯ ಸಾಧನೆ ಮಾಡಿದಾಗ ಗಮನಿಸುವುದೇ ಇಲ್ಲ ಎನ್ನುವುದು ದರ್ಶನ್ ಅಂತರಾಳದ ನೋವಿನ ಮೂಲ. ಅದಕ್ಕೆ ಅವರು ಸಂಚಾರಿ ವಿಜಯ್ ಅವರ ಉದಾಹರಣೆಯನ್ನೂ ಕೊಟ್ಟರು (ತಮ್ಮ ಸಿನಿಮಾದ ಉದಾಹರಣೆ ಕೊಡಲಿಲ್ಲವಲ್ಲ; ಕನ್ನಡದ ಭಾಗ್ಯ!). ಒಬ್ಬ ನಟನಾಗಿ, ಕನ್ನಡದ ಕುರಿತು ಪರಮಕಾಳಜಿ ಇರುವ ಕಟ್ಟಾಳು ಆಗಿ ಅವರ ಕಾಳಜಿ ಒಪ್ಪಬೇಕಾದದ್ದೇ ಬಿಡಿ. ಏನೋ ಅನುದಿನವೂ ಆಡುವ ಮಾತು, ಮೈಕು ಹಿಡಿದಾಗಲೂ ಬಂದುಬಿಟ್ಟಿತಷ್ಟೆ; ಸಂಜೆಯ ಹೊತ್ತು ಬೇರೆ. ಹಾಗೆಂದು ನೀವು ಏನು ಹೇಳುತ್ತೀರೋ ಅದನ್ನೇ ನೆಟ್ಟಗಿಟ್ಟುಕೊಂಡು ನೋಡುವಂಥ ಸಿನಿಮಾ ಮಾಡಿ ಎಂದು ಮಾರುತ್ತರ ಹೇಳಲಿಕ್ಕಾಗುತ್ತದೆಯೇ? ಡಿ ಬಾಸ್ ಮಾತಿಗೆ ಎದುರಾಡಿದರೆ ಆ ಮಾಸ್ ಭಗವಂತ ಮೆಚ್ಚಲಿಕ್ಕುಂಟೇ?

ಹೀಗಾಗಿ ಜಗತ್ತಿನ ಮೂಲೆ ಮೂಲೆಗಳಲ್ಲಿ ವ್ಯಾಪಿಸಿಕೊಂಡಿರುವ ದರ್ಶನ್ ಅಭಿಮಾನಿ ಬಳಗ ಮತ್ತು ಚಿತ್ರರಂಗದಲ್ಲಿನ ದರ್ಶನ್ ಅವರ ಬಗ್ಗಿಕೊಂಡಿರುವ 'ಆ ಜಾಗ'ದ ಪೋಷಕರೆಲ್ಲ ದರ್ಶನ್ ಮಾತನ್ನು ಸಿದ್ಧಮಾಡಿತೋರಿಸಲಿಕ್ಕೆ ಟೊಂಕಕಟ್ಟಿನಿಂತಿದ್ದಾರಂತೆ. ಅದೇ ಹೆಸರಿನಲ್ಲಿ ಒಂದು ಸಿನಿಮಾ ಕೂಡ ಸೆಟ್ಟೇರುವ ಸಾಧ್ಯತೆಯನ್ನೂ ತಳ್ಳಿಹಾಕುವಂತಿಲ್ಲ. ಆದರೆ ದರ್ಶನ್ ಮಾತ್ರ ಮಂತ್ರದ ಹಾಗೆ ಸೂತ್ರವನ್ನು ಕನ್ನಡಿಗರಿಗೆ ಕೊಟ್ಟು ತಾವು ಸುಮ್ಮನಾಗಿದ್ದಾರೆ. ಅವರ ಆಸ್ಥಾನ ನಿರ್ದೇಶಕರು, ನಿರ್ಮಾಪಕರೆಲ್ಲ ಯಾವ್ಯಾವ ತೆಲುಗು ಸಿನಿಮಾಗಳನ್ನು ತಂದು ಕನ್ನಡತಾಯಿಯ ಪದತಲಕ್ಕೆ ಸಮರ್ಪಿಸಬೇಕು ಎಂಬ ಯೋಚನೆಯಲ್ಲಿ ಮೈಮರೆತಿದ್ದಾರಂತೆ. 'ಹೀರೊಯಿಸಮ್' ಬೆಳೆಯುವುದು ಹೀಗೇ ಅಲ್ಲವೇ?

ಅಂದಹಾಗೆ ಇದೆಲ್ಲವೂ ನಡೆದಿದ್ದು ಒಂದು ಸಿನಿಮಾ ಹಾಡುಗಳ ಬಿಡುಗಡೆ ಕಾರ್ಯಕ್ರಮದಲ್ಲಿ. ಆ ಸಿನಿಮಾ ಹೆಸರು 'ಜಂಟಲ್‌ಮೆನ್'!